ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ವರ್ಷವೂ ಕೊಡುತ್ತೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಚನ್ನರಾಯಪಟ್ಟಣದ ತಾಲ್ಲೂಕಿಗೆ ಎರಡು ಬ್ಲಾಕ್‌ಗಳನ್ನು ಮಂಜೂರು ಮಾಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಹಾಸನ ಡಿಸ್ಟ್ರಿಕ್ಟಿನಲ್ಲಿ ಇರುವುದು ಎಂಟು ತಾಲ್ಲೂಕುಗಳು. ಆ ಪೈಕಿ ಈಗಾಗಲೇ ಆರು ತಾಲ್ಲೂಕುಗಳಿಗೆ ಬ್ಲಾಕು ಕೊಟ್ಟಿದೆ. ಇನ್ನು ಇರುವುದು ಎರಡು ತಾಲ್ಲೂಕುಗಳು, ಎಂದರೆ ಹಾಸನ ಮತ್ತು ಚನ್ನರಾಯಪಟ್ಟಣ ತಾಲ್ಲೂಕುಗಳು, ಬೇರೆ ಜಿಲ್ಲೆಗಳಲ್ಲಿ ಬ್ಲಾಕುಗಳಿಲ್ಲದೆ ಇರುವ ತಾಲ್ಲೂಕುಗಳು 3-4-5 ಇವೆ. ಅದನ್ನು ನೋಡಿಕೊಂಡು ಕೊಡಬೇಕು.

ಶ್ರೀ ಎಚ್. ಜಿ. ನರಸಿಂಹೇಗೌಡ.—ತಮ್ಮ ಅಭಿಪ್ರಾಯದಲ್ಲಿ ಚನ್ನರಾಯಪಟ್ಟಣದ ತಾಲ್ಲೂಕಿಗೆ ಕೊಡುವುದಿಲ್ಲ ಎಂತಲೋ ? ಹಾಗಾದರೆ ಇಂಡಿಯಾ ಸರ್ಕಾರದವರನ್ನು ನೋಡಬೇಕಾಗುತ್ತದೆ. ಸಿಕ್ಕಿದರೂ ಸಿಕ್ಕಬಹುದು, ಸಿಕ್ಕದೆಹೋದರೆ ಹೋಗಬಹುದು, ಎಂದು ಎರಡು ಅರ್ಥದಲ್ಲಿ ಹೇಳಿದರೆ ಹೇಗೆ ? ಖಚಿತವಾಗಿ ಹೇಳಿ. ಏಳೆಂಟು ಸಾರಿ ಬಂದು ನಾನು ಬರೆದುಕೊಟ್ಟಿದ್ದೇನೆ. ನಮ್ಮ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ ಮಾಡುತ್ತೇವೆಂದು ಪ್ರಾಮಿಸ್ ಮಾಡಿದ್ದೀರಿ.

ಅಧ್ಯಕ್ಷರು.—ತಾವು ಅವರು ಹೇಳಿದ್ದನ್ನು ಅರ್ಥ ಮಾಡಿಕೊಂಡಿಲ್ಲ.

Amount invested in the Mysore Government Road Transport.

*Q.—80. **Sri G. N. PUTTANNA** (Tumkur) —

Will the Government be pleased to state :—

(*a*) the total amount of money invested in the Mysore Government Road Transport Department ;

(*b*) the total number of buses road worthy and un-road worthy as on 1st February 1960 ?

*A.—**Sri K. F. PATIL** (Minister for Forest and Transport).—

(*a*) The total amount of capital invested in Mysore Government Road Transport Department till the end of November 1959 is Rs. 694·98 lakhs.

(*b*) Road worthy ... 1,209
Un-road worthy ... 281

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ, Un-road worthy ಆಗಿರತಕ್ಕ 281 ಬಸ್‌ಗಳಿವೆ ಎಂದು ಹೇಳಿದ್ದೀರಿ. ಅವುಗಳನ್ನು ಏನು ಮಾಡುತ್ತೀರಿ ?

ಶ್ರೀ ಕೆ. ಎಫ್. ಪಾಟೀಲ್.—ರಿಪೇರಿ ಮಾಡಲು ಸಾಧ್ಯವಿದ್ದರೆ ರಿಪೇರಿ ಮಾಡಲಾಗುವುದು. ಹಾಗೆ ಮಾಡಲು ಆಗದೇ ಇದ್ದಪಕ್ಷದಲ್ಲಿ ಅಂಥವುಗಳನ್ನು ಹರಾಜುಮಾಡುತ್ತೇವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಹೊಸದಾಗಿ ತರಿಸಿರತಕ್ಕ ಕೆಲವು ಚೇಸಿಸ್‌ಗಳು ಬಿಸಿಲು ಮಳೆಯಲ್ಲಿ ಹಾಳಾಗುತ್ತಿವೆ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಇಲ್ಲ. ಮಳೆ ಬಿಸಿಲು ನಲ್ಲಿ ಬದ್ದು ಹಾಳಾಗಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ನಾನೇ ಖುದ್ದಾಗಿ ಹೋಗಿ ನೋಡಿದ್ದೇನೆ, ಸ್ವಾಮಿ. 40-50 ಬಸ್‌ಗಳು ಮಳೆಯಲ್ಲಿ ಇಟ್ಟಿದ್ದರಿಂದ ಟೈರ್, ಟ್ಯೂಬ್ಸ್, ಚೇಸಿಸ್ ಕೆಟ್ಟುಹೋಗಿವೆ. ಇದನ್ನು ಪರಿಶೀಲನೆಮಾಡಿ ನೋಡುತ್ತೀರಾ ?

ಶ್ರೀ ಕೆ. ಎಫ್. ಪಾಟೀಲ್.—ಹಾಗೇನೂ ಆಗಿಲ್ಲ. ಎಂದೋ ಒಂದು ದಿವಸ ಶ್ರೀಮಾನ್ ಪುಟ್ಟಣ್ಣನವರು ಅಲ್ಲಿಗೆ ಹೋದಾಗ್ಗೆ ಆಗ್ಗೆ ಮಳೆ ಬಂದಿರಬಹುದು, ಮಳೆಯಲ್ಲಿ ತೋಯಿಸಿಕೊಂಡಿರಬಹುದು. ಅವುಗಳನ್ನು ಹೊರಗೆ ಇಡಬೇಕಾಗುತ್ತದೆ. ಬಿಸಿಲು ಮಳೆಯಲ್ಲಿ ತೋಯಿಸಿಕೊಂಡೇ ಇಲ್ಲ ಎಂದು ನಾನು ಹೇಳುವುದಿಲ್ಲವಲ್ಲ. ಆದರೆ ಅವರು ಹೇಳುವ ಹಾಗೆ ಏನೂ ಆಗಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಹೊಸದಾಗಿ ತರಿಸಿರತಕ್ಕ ಚೇಸಿಸ್‌ಗಳಿಗೆ ಷಡ್ ಮತ್ತು ಷೆಲ್ಟರ್ ಯಾವುದೂ ಇಲ್ಲದೇ 60-70 ಚೇಸಿಸ್‌ಗಳನ್ನ ಒಟ್ಟಿಗೆ ಹೊರಗಡೆ ನಿಲ್ಲಿಸಿರುವುದರಿಂದ ಟೈಯರ್ಸ್ ಕೆಟ್ಟುಹೋಗಿವೆ ಎಂಬುದು ಗೊತ್ತಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಟೈಯರ್ಸ್ ಏನೂ ಕೆಟ್ಟುಹೋಗಿಲ್ಲ. ಅಕಸ್ಮಾತ್ ಯಾವಾಗಲೋ ಒಮ್ಮೆ ಮಳೆ ಬಂದಾಗ್ಗೆ ನೀರಿನಲ್ಲಿ ಟೈಯರುಗಳು ತೋಯ್ದಿರಬಹುದು. ಅದನ್ನು ಶ್ರೀ ಪುಟ್ಟಣ್ಣನವರು ನೋಡಿರಬಹುದು.

Sri RAMAKRISHNA HEGDE.—Is it not a fact that all these un-road worthy buses are put on the roads of North Kanara District ?

Sri K. F. PATIL.—It is very uncharitable.

Sri M. RAJASEKHARAMURTHY.—Out of these 281 buses, how many buses can be made road-worthy ?

Sri K. F. PATIL.—That has to be investigated. They are now in the garages.

Release of Forest lands for Cultivation to the people of Mukanapalya in Chamarajanagar Taluk.

*Q.—100. **Sri U. M. MADAPPA** (Chamarajanagar).—

Will the Government be pleased to state:—

(*a*) the extent of land released out of forest land during the year 1954 for cultivation, to the people of Mukanapalya in Chamarajanagar taluk ;

(*b*) whether this extent of land was deforested and handed over to the